ವಾಸ್ತವ್ಯ ಮಾಡಿ ಊರಿನ ಎಲ್ಲ ವಸ್ತುಗಳನ್ನೂ ಕಚ್ಚುವ ಹಾಗೆ ಅಂಟಿಕೊಂಡು ಜೋತು ಬಿದ್ದಿರುತದೆ. ಎಷ್ಟೋ ದಿನ ಮನೆ ಮನೆಯ ಚಾವಣಿಗಳನ್ನು ಹುಲ್ಲಿನ ಟೋಪಿಗಳ ಹಾಗೆ ಹೊತ್ತುಕೊಂಡು ಹೋಗುತ್ತದೆ. ಮನೆಗಳನ್ನೆಲ್ಲ ರಕ್ಷಣೆ ಇಲ್ಲದೆ ಬತ್ತಲಾಗಿ ನಿಲ್ಲಿಸುತದೆ. ಆಮೇಲೆ ಗಾಳಿ, ಉಗುರು ಇದೆಯೇನೋ ಅದಕ್ಕೆ ಅನ್ನುವ ಹಾಗೆ ಪರಚುತ್ತದೆ. ಹಗಲೂ ರಾತ್ರಿ ಗಂಟೆಗಟ್ಟಲೆ ಹೊತ್ತು ಬಿಡುವೇ ಇಲ್ಲದೆ ಗೋಡೆಗಳನ್ನು ಪರಚುತ್ತ, ಇಷ್ಟಿಷ್ಟಗಲ ನೆಲದ ಮಣ್ಣು ಕೆತ್ತಿಕೊಂಡು ಹೋಗುತ್ತ, ಬಾಗಿಲ ಬುಡವನ್ನು ಹಾರೆಯ ಹಾಗೆ ಎಬ್ಬುತ್ತ ನಮ್ಮೊಳಗೂ ಸೇರಿ ಪ್ರಕ್ಷುಬ್ಧವಾಗಿ ಅಬ್ಬರಿಸುತ್ತ ಮೂಳೆ ಕೀಲುಗಳನ್ನೆಲ್ಲ ಕಳಚಿ ಹಾಕುತ್ತದೆ. ನೀನೇ ನೋಡುತೀಯ.'

ಮಾತನಾಡುತ್ತಾ ಇದ್ದ ಮನುಷ್ಯ ಹೊರಗೆ ನೋಡುತ್ತಾ ಸ್ವಲ್ಪ ಹೊತ್ತು ಸುಮ್ಮನಿದ್ದ. ನದಿಯ ನೀರು ಕಾಮಿಚಿನ್ ಕೊಂಬೆಗಳ ಮೇಲೆ ಹರಿಯುವ ಶಬ್ದ ಅವರ ಕಿವಿಯನ್ನು ಮುಟ್ಟುತಿತ್ತು. ಬಾದಾಮಿ ಮರದ ಎಲೆಗಳ ನಡುವೆ ಗಾಳಿ ಸುಳಿಯುತ್ತಿರುವ ಸುದ್ದಿ, ಅವರಿದ್ದ ಅಂಗಡಿಯಿಂದ ಬೀದಿಯ ಮೇಲೆ ಬೀಳುತಿದ್ದ ಬೆಳಕಿನ ಇಷ್ಟಗಲ ಜಾಗದಲ್ಲಿ ಆಡುತಿದ್ದ ಹುಡುಗರ ಚೀರಾಟ ಇವೂ ಅವರಿಗೆ ತಲುಪುತಿದ್ದವು.

ಪತಂಗಗಳು ಬಂದು ಎಣ್ಣೆಯ ದೀಪಕ್ಕೆ ಎರಗುತ್ತ ರೆಕ್ಕೆ ಸುಟ್ಟು ಬೀಳುತಿದ್ದವು. ರಾತ್ರಿ ಕತ್ತಲು ಹೊರಗೆ ಮತ್ತೂ ಮುಂದಡಿ ಇಡುತ್ತ ಬರುತಿತ್ತು.

'ಹೇಯ್, ಕ್ಯಾಮಿಲೋ! ಇನ್ನೂ ಎರಡು ಬಿಯರ್ ಕೊಡು' ಅಂದು ಆ ಮನುಷ್ಯ ಮಾತು ಮತ್ತೆ ಶುರುಮಾಡಿದ.

'ಇನ್ನೂ ಇದೆ ಸ್ವಾಮೀ. ನಿಮಗೆ ಲುವೀನಾದಲ್ಲಿ ನೀಲಿ ಆಕಾಶ ಕಾಣುವುದೇ ಇಲ್ಲ. ಇಡೀ ದಿಗಂತಕ್ಕೆ ಬಣ್ಣವೇ ಇಲ್ಲ. ಯಾವಾಗಲೂ ಮೋಡ ಮುಚ್ಚಿರುತದೆ. ಬೂದಿ ಮಂಕು ಬಣ್ಣ ಹೋಗುವುದೇ ಇಲ್ಲ. ಬೆಟ್ಟದ ನೆತ್ತಿ ಬೋಳು. ಒಂದು ಮರವೂ ಇಲ್ಲ. ಕಣ್ಣಿನ ನೋಟ ತಡೆದು ನಿಲ್ಲುವುದಕ್ಕೆ ಹಸಿರು ಅನ್ನುವುದು ಎಲ್ಲೂ ಇಲ್ಲ. ಸುಣ್ಣದೂಳು ಬೆರೆತ ಮೋಡವೇ ಎಲ್ಲೆಲ್ಲೂ ಕವಿದುಕೊಂಡಿರುತದೆ. ನೀನೇ ನೋಡುತ್ತೀಯ ಆ ಬೆಟ್ಟಗಳನ್ನ. ಬೆಳಕು ಸತ್ತಿದೆಯೋ ಅನ್ನುವ ಹಾಗೆ ಇರುವ ಜಾಗ. ಮೇಲೆ, ತುದಿಯಲ್ಲಿ ಲುವೀನಾ, ಬಿಳೀ ಮನೆಗಳ ಊರು, ಸತ್ತ ಮನುಷ್ಯನ ತಲೆಯ ಕಿರೀಟದ ಹಾಗೆ...'

ಮಕ್ಕಳ ಗಲಾಟೆ ಇನ್ನೂ ಹತ್ತಿರವಾಗುತ್ತ ಅಂಗಡಿಯೊಳಕ್ಕೇ ಬಂದಿತು. ಅದಕ್ಕೇ ಆ ಮನುಷ್ಯ ಎದ್ದು ನಿಂತ. ಬಾಗಿಲಿಗೆ ಹೋದ. 'ಹೋಗಿ ಇಲ್ಲಿಂದ. ತೊಂದರೆ ಕೊಡಬೇಡಿ. ಹೊರಗೆ ಹೋಗಿ ಆಟ ಆಡಿಕೊಳ್ಳಿ. ಗಲಾಟೆ ಮಾಡಬೇಡಿ' ಅಂದ.

ವಾಪಸ್ಸು ತಾನು ಕೂತಿದ್ದ ಟೇಬಲ್ಲಿಗೆ ಹೋಗಿ ಕೂತು ಮಾತು ಮುಂದುವರೆಸಿದ:

'ಹ್ಞೂಂ. ಹೇಳತಾ ಇದ್ದೆನಲ್ಲ. ಇಲ್ಲಿ ಮಳೆ ತುಂಬ ಕಡಮೆ. ವರ್ಷದ ಮಧ್ಯದಲ್ಲಿ ಒಂದಾದ ಮೇಲೆ ಇನ್ನೊಂದು ಬಿರುಗಾಳಿ ಬಂದು ಅಪ್ಪಳಿಸುತದೆ. ಭೂಮಿಯನ್ನೆಲ್ಲ ಸೀಳಿ ಹಾಕಿ ಒಳಗಿದ್ದ ಕಲ್ಲುಗಳ ಸಮುದ್ರವನ್ನಷ್ಟೇ ನೆಲದ ಮೇಲೇ ತೇಲುವ ಹಾಗೆ ಉಳಿಸಿ ಹೋಗುತದೆ. ಆಮೇಲೆ, ತಿದಿಯ ಹಾಗೆ ಉಬ್ಬಿಕೊಂಡು ಬೆಟ್ಟದಿಂದ ಬೆಟ್ಟಕ್ಕೆ ಅಲೆಯುವ ಮೋಡ ನಿಧಾನವಾಗಿ ಉರುಳಿಕೊಂಡು ಹೋಗಿ ಬೆಟ್ಟದ ನೆತ್ತಿಗೆ ಡಿಕ್ಕಿ ಹೊಡೆದು, ಸದ್ದು ಮಾಡಿ, ಹಿಮ್ಮೆಟ್ಟಿ, ಬೆಟ್ಟದ ಅಂಚು ಸೀಳುವ ಹಾಗೆ ಮತ್ತೆ ಒತ್ತರಿಸಿಕೊಂಡು ಹೋಗುವುದನ್ನು ನೋಡುವುದಕ್ಕೆ ಚೆನ್ನಾಗಿರತದೆ. ಹತ್ತು ಹನ್ನೆರಡು ದಿನ ಹೀಗಿದ್ದು ಹೋಗಿ ಬಿಡುತವೆ, ಮತ್ತೆ ಮುಂದಿನ ವರ್ಷದವರೆಗೂ ಪತ್ತೆ ಇರುವುದಿಲ್ಲ. ಒಂದೊಂದು ಸಾರಿ ಎಷ್ಟೋ ವರ್ಷ ಬರುವುದೇ ಇಲ್ಲ...